ಕರ್ನಾಟಕ ಸರ್ಕಾರ

**ನಿರ್ದೇಶಕರ ಕಛೇರಿ, ಶಾಲಾ ಶಿಕ್ಷಣ ಇಲಾಖೆ (ಪದವಿ ಪೂರ್ವ), 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-560012**

**ಇ-ಮೇಲ್:commissioner.pue@gmail.com ಸ್ಥಿರ ದೂರವಾಣಿ ಸಂ:080-23562033**

ಸಂಖ್ಯೆ:1412943:DPUE-EST30AS(HOKA)/18/2024-R AND G-D ದಿನಾಂಕ: 20-06-2024

## ಅಧಿಕೃತ ಜ್ಞಾಪನ

ವಿಷಯ: ಎಂ.ಎನ್.ವಿ. ಎಜುಕೇಷನಲ್ ಚಾರಿಟಬಲ್ ಟ್ರಸ್ಟ್ (ರಿ), 21 ಮಹೆಲ್ ಚೌಡೇನಹಳ್ಳಿ, ಸರ್ಜಾಪುರ ಪೋ, ಆನೇಕಲ್ ತಾಲ್ಲೂಕು, ಬೆಂಗಳೂರು-562125 ಇವರಿಗೆ 2024-25ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಖಾಸಗಿ ಶಾಶ್ವತ ಅನುದಾನ ರಹಿತ ಪದವಿ ಪೂರ್ವ ಕಾಲೇಜನ್ನು ಪ್ರಾರಂಭಿಸಲು ಅನುಮತಿ ನೀಡುವ ಕುರಿತು.

ಉಲ್ಲೇಖ:

1. ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 136 ಟಿಪಿಯು 1999, ದಿನಾಂಕ: 09-10-2006
2. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ: 08-03-2018.
3. ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 107 ಟಿಪಿಯು 2017, ದಿನಾಂಕ: 27-09-2018.
4. ಈ ಕಛೇರಿ ಸುತ್ತೋಲೆ ಸಂಖ್ಯೆ: ಡಿಪಿಯುಇ ಎಎಸ್ ಟಿ 30 ಪಿಆರ್ ಜಿ(ಎನ್ ಸಿ 1/2023-ಪಾಲಿಸಿ-ಇ 12221431 ದಿನಾಂಕ 09-11-2023
5. ಅನ್‌ಲೈನ್ ಮೂಲಕ ಸಂಸ್ಥೆ/ ಟ್ರಸ್ಟ್ Form-Iರಲ್ಲಿ ಸಲ್ಲಿಸಿರುವ ಅರ್ಜಿ ದಿನಾಂಕ: 04-01-2024
6. ಈ ಕಛೇರಿಯ ಸಮ ಸಂಖ್ಯೆಯ Letter of Intent ದಿನಾಂಕ: 04-01-2024.
7. ಜಿಲ್ಲಾ ತಪಾಸಣಾ ಸಮಿತಿಯ ವರದಿ ದಿನಾಂಕ 19-02-2024
8. ಜಿಲ್ಲಾ ಉಪ ನಿದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ, ಇವರ ಪತ್ರ ದಿನಾಂಕ

*****

### ಪ್ರಸ್ತಾವನೆ:

ಎಂ.ಎನ್.ವಿ. ಎಜುಕೇಷನಲ್ ಚಾರಿಟಬಲ್ ಟ್ರಸ್ಟ್ (ರಿ), 21 ಮಹೆಲ್ ಚೌಡೇನಹಳ್ಳಿ, ಸರ್ಜಾಪುರ ಪೋ, ಆನೇಕಲ್ ತಾಲ್ಲೂಕು, ಬೆಂಗಳೂರು-562125 , ಈ ಸಂಸ್ಥೆಯು ಉಲ್ಲೇಖ-1ರ ಅಧಿಸೂಚನೆಯಲ್ಲಿ ಕಾಲೇಜು ಪ್ರಾರಂಭಿಸಲು ಅವಕಾಶ ಕಲ್ಪಿಸಿರುವಂತೆ 36/3, 36/6 ಗುದಿಗಟ್ಟನಹಳ್ಳಿ, ಸರ್ಜಾಪುರ ಪೋ, ಆನೇಕಲ್ ತಾಲ್ಲೂಕು, ಬೆಂಗಳೂರು-562125ಈ ಸ್ಥಳದಲ್ಲಿ ಪಿನಾಕಲ್ ಸ್ಕೂಲ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ ಮೆಂಟ್, ಪದವಿ ಪೂರ್ವ ಕಾಲೇಜನ್ನು, ಹೊಸದಾಗಿ ಖಾಸಗಿ ಶಾಶ್ವತ ಅನುದಾನ ರಹಿತವಾಗಿ ಪ್ರಾರಂಭಿಸಲು ಮಂಜೂರಾತಿ ನೀಡುವಂತೆ ಅರ್ಜಿ ಸಲ್ಲಿಸಿರುತ್ತಾರೆ. ಸದರಿ ಅರ್ಜಿಯ ಅನುಸಾರ ಜಿಲ್ಲಾ ತಪಾಸಣಾ ಸಮಿತಿಯು ಉಲ್ಲೇಖ-2 ಮತ್ತು 3ರ ಅಧಿಸೂಚನೆಗಳ

ಅನ್ವಯ ಉದ್ದೇಶಿತ ಪದವಿ ಪೂರ್ವ ಕಾಲೇಜಿನ ಸ್ಥಳ ಪರಿಶೀಲನೆ ನಡೆಸಿ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಹೊಂದಿರುವ ಬಗ್ಗೆ ಉಲ್ಲೇಖ-8 ರನ್ವಯ ಜಿಲ್ಲಾ ಉಪನಿರ್ದೇಶಕರ ಮೂಲಕ ವರದಿಯನ್ನು ಸಲ್ಲಿಸಿರುತ್ತಾರೆ. ತಪಾಸಣಾ ಸಮಿತಿಯು ಸಲ್ಲಿಸಿರುವ ವರದಿಯನ್ನು ಪರಿಶೀಲಿಸಿ, ಸರ್ಕಾರದ ಪತ್ರ ಸಂಖ್ಯೆ: ಇಡಿ 44 ಎಸ್‌ಹೆಚ್‌ಹೆಚ್ 2018 ದಿನಾಂಕ: 08-03-2019 ರನ್ವಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ಕೆಳಕಂಡಂತೆ ಆದೇಶಿಸಿದೆ.

**ಆದೇಶ :**

ಎಂ.ಎನ್.ವಿ. ಎಜುಕೇಷನಲ್ ಚಾರಿಟಬಲ್ ಟ್ರಸ್ಟ್ (ರಿ), 21 ಮಹೆಲ್ ಚೌಡೇನಹಳ್ಳಿ, ಸರ್ಜಾಪುರ ಪೋ, ಆನೇಕಲ್ ತಾಲ್ಲೂಕು, ಬೆಂಗಳೂರು-562125, ಇವರಿಗೆ. 36/3, 36/6 ಗುದಿಗಟ್ಟನಹಳ್ಳಿ, ಸರ್ಜಾಪುರ ಪೋ, ಆನೇಕಲ್ ತಾಲ್ಲೂಕು, ಬೆಂಗಳೂರು-562125 ಈ ಸ್ಥಳದಲ್ಲಿ ಪಿನಾಕಲ್ ಸ್ಕೂಲ್ ಆಫ್ ಕಾಮರ್ಸ್ ಅಂಡ್ ಮ್ಯಾನೇಜ್ ಮೆಂಟ್ ಪದವಿ ಪೂರ್ವ ಕಾಲೇಜನ್ನು 2024-25ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಖಾಸಗಿ ಶಾಶ್ವತ ಅನುದಾನ ರಹಿತವಾಗಿ ಪ್ರಾರಂಭಿಸಲು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ಮಂಜೂರಾತಿ ಆದೇಶ ಹೊರಡಿಸಿದೆ.

**ಷರತ್ತುಗಳು:-**

1. ಮಂಜೂರಾತಿಯು ಶಾಶ್ವತ ಅನುದಾನ ರಹಿತ ಷರತ್ತಿಗೊಳಪಟ್ಟಿದೆ. (Permanently without Grant-in-aid)
2. ವಿದ್ಯಾಸಂಸ್ಥೆಯ ಆಡಳಿತ ಮಂಡಳಿಯು ಕಾಲೇಜಿಗೆ ಅಗತ್ಯವಾದ ಕಟ್ಟಡ, ಪ್ರಯೋಗಾಲಯ, ಪಾಠೋಪಕರಣ, ಪೀಠೋಪಕರಣ, ಆಟದ ಮೈದಾನ, ಗ್ರಂಥಾಲಯ ಹಾಗೂ ಇನ್ನಿತರೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಾಲೇಜು ಪ್ರಾರಂಭಿಸುವ ಮುನ್ನ ಒದಗಿಸಿಕೊಂಡಿರತಕ್ಕದ್ದು. ಜಿಲ್ಲಾ ಉಪನಿರ್ದೇಶಕರು ಮಂಜೂರಾದ ಕಾಲೇಜಿಗೆ ಪ್ರಥಮ ಶೈಕ್ಷಣಿಕ ಮಾನ್ಯತೆ ಶಿಫಾರಸ್ಸು ಮಾಡುವ ಪೂರ್ವದಲ್ಲಿ ಮೇಲಿನ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಖಚಿತಪಡಿಸಿಕೊಂಡ ನಂತರವೇ ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.
3. ಆಡಳಿತ ಮಂಡಳಿಯವರು ಸರ್ಕಾರಕ್ಕೆ ಪಾವತಿ ಮಾಡಬೇಕಾದ ನೋಂದಣಿ ಶುಲ್ಕ, ಜಂಟಿ ಖಾತೆಯಲ್ಲಿ ತೊಡಗಿಸಬೇಕಾದ ಸ್ಥಿರನಿಧಿ ಠೇವಣಿ ಮತ್ತು ಭದ್ರತಾ ಠೇವಣಿಗಳ ಮೂಲ ಬಾಂಡ್ ಅನ್ನು ಸಲ್ಲಿಸತಕ್ಕದ್ದು.
4. ಪ್ರಸ್ತುತ ಮಂಜೂರು ಮಾಡಿರುವ ಕಾಲೇಜಿನ ಸ್ಥಳ ಬದಲಾವಣೆ ಕುರಿತಂತೆ ಯಾವುದೇ ಕಾರಣಕ್ಕೂ ಅವಕಾಶ ಇರುವುದಿಲ್ಲ.
5. ಸರ್ಕಾರ / ಇಲಾಖೆಯಿಂದ ಜಾರಿಯಲ್ಲಿರುವ ಹಾಗೂ ಕಾಲಕಾಲಕ್ಕೆ ಹೊರಡಿಸುವ ಎಲ್ಲಾ ಆದೇಶಗಳು ಮತ್ತು ನಿಯಮಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.
6. ಕರ್ನಾಟಕ ಶಿಕ್ಷಣ ಕಾಯ್ದೆ 1983ರ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
7. ಆಡಳಿತ ಮಂಡಳಿಯು ಸರ್ಕಾರದಿಂದ / ಇಲಾಖೆಯಿಂದ ಯಾವುದೇ ಅನುದಾನವನ್ನು ಬಯಸುವುದಿಲ್ಲವೆಂದು ಹಾಗೂ ಶಾಶ್ವತ ಅನುದಾನ ರಹಿತವಾಗಿ ಕಾಲೇಜನ್ನು ನಡೆಸುತ್ತೇವೆಂದು 200/- ರೂಗಳ ಇ-ಸ್ಟಾಂಪ್‌ನಲ್ಲಿ ನೋಟರಿ ಸಮ್ಮುಖದಲ್ಲಿ ಪ್ರಮಾಣೀಕರಿಸಿದ ಒಪ್ಪಿಗೆ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸತಕ್ಕದ್ದು.
8. ಈ ಮಂಜೂರಾತಿ ಆದೇಶವು ಕಾಲೇಜನ್ನು ಪ್ರಾರಂಭಿಸಲು ಅನುಮತಿ ಮಾತ್ರ ಆಗಿರುತ್ತದೆ.
9. ನಿರ್ದೇಶನಾಲಯದಿಂದ ಪ್ರಥಮ ಶೈಕ್ಷಣಿಕ ಮಾನ್ಯತೆ ಅನುಮತಿ / ಅನುಮೋದನೆ ಪಡೆಯದ ಹೊರತು ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳನ್ನು ಪ್ರವೇಶ ದಾಖಲಾತಿ ಮಾಡಿಕೊಳ್ಳತಕ್ಕದ್ದಲ್ಲವೆಂದು ಕಟ್ಟುನಿಟ್ಟಾಗಿ ಸೂಚಿಸಿದೆ.
10. ಮಂಜೂರಾತಿ ಹೊರಡಿಸಿದ ಶೈಕ್ಷಣಿಕ ಸಾಲಿನಲ್ಲೇ ಕಾಲೇಜನ್ನು ಪ್ರಾರಂಭಿಸತಕ್ಕದ್ದು, ಒಂದೊಮ್ಮೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಕಾಲೇಜನ್ನು ಪ್ರಾರಂಭಿಸಲು ಸಂಸ್ಥೆ / ಟ್ರಸ್ಟ್‌ನ ಆಡಳಿತ ಮಂಡಳಿಯು ವಿಫಲರಾದಲ್ಲಿ ಮಂಜೂರಾತಿ ಆದೇಶವು ತಂತಾನೆ ರದ್ದಾಗಿದೆ ಎಂದು ಪರಿಗಣಿಸಲಾಗುವುದು.
11. ಜಿಲ್ಲಾ ಉಪ ನಿರ್ದೇಶಕರು ಪ್ರಥಮ ಶೈಕ್ಷಣಿಕ ಮಾನ್ಯತೆ ಕೋರಿ ಶಿಫಾರಸ್ಸು ಮಾಡುವ ಪೂರ್ವದಲ್ಲಿ ಮಂಜೂರಾದ ಕಾಲೇಜಿನ ಕಟ್ಟಡದ ಸುರಕ್ಷತೆ ಕುರಿತಂತೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 709 ಪಿಜಿಸಿ 2017 ದಿನಾಂಕ: 08-03-2018 ರಂತೆ safety and security of students ನಿಯಮಗಳ ಅನುಸಾರ ಅಗತ್ಯ ಕ್ರಮಗಳನ್ನು ವಿದ್ಯಾಸಂಸ್ಥೆಯು ಒದಗಿಸಿಕೊಂಡಿರುವ ಬಗ್ಗೆ ಹಾಗೂ ಈ ಕುರಿತು ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರ ಪಡೆದಿರುವುದನ್ನು ಖಚಿತಪಡಿಸಿಕೊಂಡ ನಂತರವೇ ಜಿಲ್ಲಾ ಉಪ ನಿರ್ದೇಶಕರು ಸ್ಪಷ್ಟ ಅಭಿಪ್ರಾಯದೊಂದಿಗೆ ಪ್ರಸ್ತಾವನೆ ಸಲ್ಲಿಸತಕ್ಕದ್ದು.
12. ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ ಇತರ) ನಿಯಮಗಳು 2006ರ

ನಿಯಮಗಳು ಸರ್ಕಾರದ ಅಧಿಸೂಚನೆ ಸಂಖ್ಯೆ ಇಡಿ 136 ಟಿಪಿಯು 1999 ದಿನಾಂಕ.09-10-2006 ರಲ್ಲಿ ಜಾರಿಗೆ ಬಂದಿದ್ದು, ಸದರಿ ನಿಯಮಗಳನ್ನು ಚಾಚೂತಪ್ಪದೇ, ಕಟ್ಟುನಿಟ್ಟಾಗಿ ಪಾಲಿಸತಕ್ಕದ್ದು.

13. ಪ್ರಯೋಗಾಲಯ ಉಪಕರಣಗಳನ್ನು ಹಾಗೂ ಗಣಕಯಂತ್ರಗಳನ್ನು ಅಗತ್ಯಾನುಸಾರ ಪ್ರಥಮ ಶೈಕ್ಷಣಿಕ ಮಾನ್ಯತೆ ಕೋರಿ ಪ್ರಸ್ತಾವನೆ ಸಲ್ಲಿಸುವ ಪೂರ್ವದಲ್ಲಿ ಹೊಂದಿಸಿಕೊಂಡ ನಂತರವೇ ಪ್ರಸ್ತಾವನೆ ಸಲ್ಲಿಸುವುದು
14. **ಸದರಿ ಕಾಲೇಜಿನ ಪ್ರಥಮ ಶೈಕ್ಷಣಿಕ ಮಾನ್ಯತೆಗೆ ಅನುಮತಿ ನೀಡುವ ಕುರಿತು ಜಿಲ್ಲಾ ಉಪ ನಿರ್ದೇಶಕರು, ಇದರೊಂದಿಗೆ ಲಗತ್ತಿಸಿದ ಚೆಕ್‌ಲಿಸ್ಟ್ ನಲ್ಲಿ ಸಂಪೂರ್ಣ ಮಾಹಿತಿ/ ದಾಖಲೆಯನ್ನು ಭರ್ತಿಮಾಡಿ ಸಲ್ಲಿಸತಕ್ಕದ್ದು.**

{ನಿರ್ದೇಶಕರ ಆದೇಶದ ಮೇರೆಗೆ}

Signed by
Swetha G N
Date: 20-06-2024 11:01:03

SWETHA G N, JD (SWGN)-R&G, O/o JOINT DIRECTOR-R&G-DPUE

ರವರಿಗೆ,

ಅಧ್ಯಕ್ಷರು / ಕಾರ್ಯದರ್ಶಿಗಳು ಎಂ.ಎನ್.ವಿ. ಎಜುಕೇಷನಲ್ ಚಾರಿಟಬಲ್ ಟ್ರಸ್ಟ್ (ರಿ), 21 ಮಹೇಲ್ ಚೌಡೇನಹಳ್ಳಿ, ಸರ್ಜಾಪುರ ಪೋ, ಆನೇಕಲ್ ತಾಲ್ಲೂಕು, ಬೆಂಗಳೂರು-562125

ಪ್ರತಿಗಳು:

1) ಉಪ ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಬೆಂಗಳೂರು ದಕ್ಷಿಣ ಜಿಲ್ಲೆ.

2) ಹೆಚ್ಚುವರಿ / ಕಛೇರಿ ಪ್ರತಿ.